ಓಎಸ್ ನಂಃ 38/2012 ಡಿಡಬ್ಲ್ಯೂ- 1

ದಿನಾಂಕಃ 06.01.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀಸವಾಲುಃ ವಾದಿಯ ಪರ ಶ್ರೀ ಹೆಚ್.ಜೆ.ಯು ವಕೀಲರಿಂದಃ

ದಾವಾ ಆಸ್ತಿ ಖರೀದಿ ಮಾಡುವ ಮುನ್ನ ಯಾರ ಹೆಸರಿನಲ್ಲಿತ್ತು ಎಂದರೆ 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎನ್ನುತ್ತಾರೆ. ನೀವು ಖರೀದಿ ಮಾಡುವಾಗ ಯಾವ ದಾಖಲೆಯನ್ನು ನೋಡಿರುತ್ತೀರ ಎದಂರೆ ಖರೀದಿ ಪತ್ರ ನೋಡಿರುತ್ತೇನೆ ಸದರಿ ಪತ್ರ ವಾದಿಯ ಹೆಸರಿನಲ್ಲಿತ್ತು ಎನ್ನುತ್ತಾರೆ. ಸದರಿ ಆಸ್ತಿ ಒಟ್ಟು 20 ಗುಂಟೆ ಇತ್ತು ಎನ್ನುತ್ತಾರೆ. ಸದರಿ ಆಸ್ತಿಯನ್ನು ಕೊಂಡುಕೊಳ್ಳುವಾಗ ಬೇರೆ ಯಾವ ದಾಖಲಾತಿ ನೋಡಿರುತ್ತೀರ ಎಂದರೆ ಬೇರೆ ಯಾವ ದಾಖಲಾತಿ ನೋಡಿಲ್ಲ ಎನ್ನುತ್ತಾರೆ. ನೀವು ಒಟ್ಟು ಎಷ್ಟು ಗುಂಟೆ ಆಸ್ತಿ ಖರೀದಿ ಮಾಡಿರುತ್ತೀರಿ ಎದಂರೆ ಸಾಕ್ಷಿ 14 ಗುಂಟೆ ಎನ್ನುತ್ತಾರೆ. ಸದರಿ 14 ಗುಂಟೆಯನ್ನು ಒಂದೇ ಚಕ್ಕುಬಂದಿಯಲ್ಲಿ ಕೊಂಡುಕೊಂಡಿರುತ್ತೀರ ಎಂದರೆ ಸಾಕ್ಷಿ ಬೇರೆ ಬೇರೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು 10 ಗುಂಟೆ ಆಸ್ತಿಯನ್ನು 71/3 ಮತ್ತು ಉಳಿಕೆ 4 ಗುಂಟೆ 71 ಸರ್ವೇ ನಂಬರ್ ನಲ್ಲಿ ಕೊಂಡುಕೊಂಡಿರುತ್ತೇನೆ. ಸದರಿ 10 ಗುಂಟೆ ಆಸ್ತಿಗೆ ಚಕ್ಕುಬಂದಿ ಪೂ- ಕಂಬಣ್ಣ, ಪ- ಕೆ.ಬಸವರಾಜು, ಉ- ಜಯಮ್ಮ, ದ- ಶ್ರವಣಬೆಳಗೊಳ ರಸ್ತೆ. 4 ಗುಂಟೆಗೆ ಚಕ್ಕುಬಂದಿ ಪೂ- 10 ಗುಂಟೆ ಆಸ್ತಿ 71/3, ಪ- ವಾದಿ, ಉ- ನಾಲೆ, ದ- ಶ್ರವಣಬೆಳಗೊಳ ರಸ್ತೆ. ನೀವು ಖರೀದಿ ಮಾಡಿರುವ ಆಸ್ತಿದುಲ್ಲದೇ ವಾದಿಯ ಎ ಷಡ್ಯೂಲ್ ನಲ್ಲಿ 4 ಗುಂಟೆ ಪೈಕಿ 3 ಗುಂಟೆ ಆಸ್ತಿ ಒತ್ತುವರಿ ಮಾಡಿರುತ್ತೀರ ಎಂದರೆ ಇಲ್ಲ ಎನ್ನುತ್ತಾರೆ. ಸದರಿ ಒತ್ತುವರಿಯಾದ ಬಗ್ಗೆ ನಿಸಿ 7 ರಂತೆ

ಒತ್ತುವರಿ ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ಆಸ್ತಿಯಾದ 14 ಗುಂಟೆ ಹೊರತುಪಡಿಸಿ ವಾದಿಯ 3 ಗುಂಟೆ ಒತ್ತುವರಿ ಮಾಡಿರುವ ಆಸ್ತಿಯ ಮೇಲೆ ನಿಮಗೆ ಯಾವುದೇ ರೀತಿ ಹಕ್ಕು ಬಾದ್ಯತೆ ಇಲ್ಲ ಎಂದರೆ ಸಾಕ್ಷಿ ಜಮೀನೆ ಇಲ್ಲ ಎನ್ನುತ್ತಾರೆ. ವಾದಿಯ ಆಸ್ತಿ ಒಟ್ಟು 20 ಗುಂಟೆ ಮತ್ತು 2 ಗುಂಟೆ ಖರಾಬು ಇರುತ್ತದೆ ಎಂದರೆ ಸರಿ. ವಾದಿಯು ಉಳಿಕೆ 18 ಗುಂಟೆ ಪೈಕಿ 14 ಗುಂಟೆ ಮಾರಾಟ ಮಾಡಿ ಉಳಿಕೆ 4 ಗುಂಟೆಯಲ್ಲಿ ಸ್ವಾದಿನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಈಗಲೂ ಸಹ ಪಹಣಿಯಲ್ಲಿ ವಾದಿಯ ಹೆಸರು ಬರುತ್ತಿದೆ ಎಂದರೆ ಸಾಕ್ಷಿ ನಾಲೆಗೆಂದು ಜಮೀನು ಹೋಗಿರುತ್ತದೆ ಆದ್ದರಿಂದ ಅವರ ಅಜ್ಜಿಯ ಹೆಸರು ನಮೂದಾಗಿರುತ್ತದೆ ಎನ್ನುತ್ತಾರೆ. ಸದರಿ 4 ಗುಂಟೆ ಆಸ್ತಿ ನಾಲೆಗೆ ಹೋಗಿರುವುದಿಲ್ಲ ಈಗಲೂ ಸಹ ವಾದಿಯ ಸ್ವಾದಿನದಲ್ಲಿರುತ್ತದೆ ಎಂದರೆ ಸರಿಯಲ್ಲ. ಪಹಣಿ ಇಂಡಿಕರಣ ಆಗಿರುವುದಿಲ್ಲ ಇಂದಿಗೂ ಸಹ ವಾದಿಯ ಹೆಸರಿಗೆ ಬರುತ್ತದೆ ಎಂದರೆ ಸಾಕ್ಷಿ ಇಂಡಿಕರಣ ಮಾಡಿರುವುದಿಲ್ಲ ಎನ್ನುತ್ತಾರೆ. ನೀವು ಕೊಂಡುಕೊಂಡಿರುವ 14 ಗುಂಟೆ ಆಸ್ತಿ ಖಾತೆಯಾಗಿರುತ್ತದೆಯಾ ಎಂದರೆ ಇಲ್ಲ ಎನ್ನುತ್ತಾರೆ. ಯಾವ ಇಸವಿಯಲ್ಲಿ ಆಸ್ತಿಯನ್ನು ಖರೀದಿ ಮಾಡಿರುತ್ತೀರ ಎಂದರೆ 1998 ರಲ್ಲಿ ಎನ್ನುತ್ತಾರೆ. ಖಾತೆ ಮಾಡಲು ಪ್ರಯತ್ನ ಮಾಡಿರುತ್ತೀರ ಎಂದರೆ ಮಾಡಿರುತ್ತೇವೆ ಎನ್ನುತ್ತಾರೆ. ಸದರಿ ದಾಖಲಾತಿಯನ್ನು ಹಾಜರು ಮಾಡಲು ತೊಂದರೆ ಇದೆಯಾ ಎಂದರೆ ಕೊಡುತ್ತೇನೆ ಎನ್ನುತ್ತಾರೆ. ನಿಮಗೆ ಯಾವುದೇ ರೀತಿ ಹಕ್ಕು ಅಧಿಕಾರ ಇಲ್ಲದಿದ್ದರೂ ಸಹ ವಾದಿಯ 4 ಗುಂಟೆ ಆಸ್ತಿಯ ಪೈಕಿ 3 ಗುಂಟೆ ಆಸ್ತಿಯನ್ನು ಒತ್ತುವರಿ ಮಾಡಿರುತ್ತೀರ ಎಂದರೆ ಇಲ್ಲ ಎನ್ನುತ್ತಾರೆ. ವಾದಿ ತೀರಿಕೊಂಡ ಅವರ ವಾರಸುದಾರರು 1 ಗುಂಟೆ ಆಸ್ತಿಯಲ್ಲಿ ಭೌತಿಕ ಸ್ವಾದಿನದಲ್ಲಿರುತ್ತಾರೆ ಮತ್ತು 3 ಗುಂಟೆ ಆಸ್ತಿಯನ್ನು ನೀವು ಒತ್ತುವರಿ ಮಾಡಿರುತ್ತೀರ ಎಂದರೇ ಸರಿಯಲ್ಲ.

ಸದರಿ 4 ಗುಂಟೆ ಆಸ್ತಿ ಪೈಕಿ 3 ಗುಂಟೆ ವಾದಿಯ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ಸದರಿ 14 ಗುಂಟೆ ಆಸ್ತಿ 1 ಪ್ರತಿವಾದಿ ಹೆಸರಿನಲ್ಲಿತ್ತು ಎಂದರೆ ಇತ್ತು ಎನ್ನುತ್ತಾರೆ.

ಮರು ವಿಚಾರಣೆ: ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

**C/C ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.**
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ**